# ಕರ್ತನ ದಿನ

## ಓವೆನ್ ಡಿ. ಓಲ್‌ಬ್ರಿಟ್ಜ್

*"ನಾನು ಕರ್ತನ ದಿನದಲ್ಲಿ ದೇವರಾತ್ಮ ವಶನಾಗಿ ನನ್ನ ಹಿಂದುಗಡೆ ತುತೂರಿಯ ಶಬ್ದದಂತಿರುವ ಮಹಾ ಶಬ್ದವನ್ನು ಕೇಳಿದೆನು" (ಪ್ರಕಟನೆ 1:10).*

ಇಸ್ರಾಯೇಲ್ಯರಿಗೆ ಐಗುಪ್ತ್ಯದ ಗುಲಾಮಗಿರಿಯಿಂದ ವಿಮೋಚಿಸಲ್ಪಟ್ಟದ್ದನ್ನು ಜ್ಞಾಪಿಸಿಕೊಳ್ಳಲು ಒಂದು ದಿನವಿತ್ತು. ಪಾಪಕ್ಕೆ ಗುಲಾಮರಾಗಿದ್ದರಿಂದ ತಮ್ಮ ಬಿಡುಗಡೆಯನ್ನು ಜ್ಞಾಪಿಸಿಕೊಳ್ಳುವದಕ್ಕಾಗಿ ಕ್ರೈಸ್ತರಿಗೆ ವಿಶೇಷ ದಿನವಿರುವುದೋ? ಕ್ರೈಸ್ತರು ಇಸ್ರಾಯೇಲ್ಯರ ವಿಶ್ರಾಂತಿಯ ದಿನವಾದ ಸಬ್ಬತ್ ದಿನದಂದು ಕೂಡಿಬರ ಬೇಕೋ ಇಲ್ಲವೇ ತನ್ನ ಮರಣ ಮತ್ತು ಪುನರುತ್ಥಾನದ ಮುಖಾಂತರ ಅವರನ್ನು ಬಿಡುಗಡೆ ಮಾಡಿದ ಒಬ್ಬಾತನನ್ನು ಜ್ಞಾಪಿಸಿಕೊಳ್ಳಲು ಅವರ ಸ್ವಂತದ ವಿಶೇಷ ದಿನ ಅವರಿಗೆ ಇರುವುದೋ?

ಕ್ರೈಸ್ತರು ಕೂಡಿ ಬರುವ ದಿನಕ್ಕಾಗಿ ಪುರಾವೆಯು ಇವುಗಳ ಮೇಲೆ ಅವಲಂಭಿಸಿದೆ - (1) ಹೊಸ ಒಡಂಬಡಿಕೆಯ ಬೋಧನೆ, (2) ಆದಿ ಸಭೆಯಲ್ಲಿ ಉಪಯೋಗಿಸಿದ "ಕರ್ತನ ದಿನ" ಎಂಬುದರ ಅರ್ಥ, ಮತ್ತು (3) ಕ್ರೈಸ್ತರ ಮತ್ತು ಕ್ರೈಸ್ತೇತರರ ಮೊದಲಿನ ಬರಹಗಳಲ್ಲಿ ಕಂಡುಬಂದ ಐತಿಹಾಸಿಕ ದಾಖಲೆಗಳು, ಆದಿ ಕ್ರೈಸ್ತರು ಏಳನೆಯ ದಿನದಂದು ಕೂಡಿಬಂದಿದ್ದರೆ, ಸಬ್ಬತ್ ದಿನದ ಯೆಹೂದಿ ಕೂಟಗಳಿಗಿಂತ ಭಿನ್ನವಾದ ಉದ್ದೇಶಕ್ಕಾಗಿತ್ತು.

ಯೇಸುವಿನ ಸಮಯದಲ್ಲಿ, ಯೆಹೂದಿ ಜನರು ಸಬ್ಬತ್ ದಿನದಂದು ಕೂಡಿ ಬರುತ್ತಿದ್ದರು. ಅವರು ಆ ದಿನದಲ್ಲಿ ಕೆಲಸ ಮಾಡದೇ ಇರುತ್ತಿದ್ದುದರಿಂದ, ಅವರಿಗೆ ಅನುಕೂಲವಾದ ಸಮಯವಾಗಿತ್ತು. "ಸಭಾಮಂದಿರದ ಮುಖ್ಯ ಉದ್ದೇಶವು ಬಹಿರಂಗ ಆರಾಧನೆ ಆಗಿರಲಿಲ್ಲ, ಆದರೆ ಪರಿಶುದ್ಧ ಬರಹಗಳಲ್ಲಿ ಬೋಧನೆಗಾಗಿತ್ತು."[1]

### ಹೊಸ ಒಡಂಬಡಿಕೆಯ ವಾಕ್ಯ ಭಾಗಗಳು

ಕ್ರೈಸ್ತರು ಸಬ್ಬತ್ ದಿನದಂದು ಕೂಡಿಬರುತ್ತಿರಲಿಲ್ಲ, ಯೇಸುವಿನ ಮರಣ ಮತ್ತು ಪುನರುತ್ಥಾನವನ್ನು ಜ್ಞಾಪಿಸಿಕೊಳ್ಳಲು, ಸಬ್ಬತ್ ದಿನದ ನಂತರದ ದಿನದಂದು ಕೂಡಿಬರುತ್ತಿತ್ತು.

ಒಂದು ವಿಶೇಷವಾದ ದಿನದಂದು ಕ್ರೈಸ್ತರು ಕೂಡಿಬಂದದ್ದಕ್ಕೆ ಉಲ್ಲೇಖವು ಅಪೊಸ್ತಲರ ಕೃತ್ಯಗಳು 20:7ರಲ್ಲಿ ಕಂಡು ಬರುತ್ತದೆ:

> ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನ ವರೆಗೂ ಉಪನ್ಯಾಸವನ್ನು ನಡಿಸಿದನು (ಅಪೊಸ್ತಲರ ಕೃತ್ಯಗಳು 20:7).

ಪಂಚಾಶತ್ತಮ ಹಬ್ಬಕ್ಕಾಗಿ ಸಮಯದಲ್ಲಿ ಯೆರೂಸಲೇಮನ್ನು ತಲುಪಲು ಪೌಲನು ಅವಸರದಲ್ಲಿದ್ದರೂ (ಅಪೊಸ್ತಲರ ಕೃತ್ಯಗಳು 20:16) ತ್ರೋವದಲ್ಲಿ ಅವನು ಇಡೀ ಒಂದು ವಾರ ಕಾದುಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 20:6) ಅದರಿಂದ, ವಾರದ ಮೊದಲನೆಯ ದಿನ, ಕ್ರೈಸ್ತರೊಂದಿಗೆ ಅವರ ಕೂಟದಲ್ಲಿ ಅವರ ಜೊತೆಯಲ್ಲಿದ್ದನು. ಅವರು ರೊಟ್ಟಿ ಮುರಿಯಲು ಕೂಡಿಬಂದಾಗ, ಅವನು ಅವರಿಗೆ ಪ್ರಸಂಗಿಸಲು ಅವಕಾಶವನ್ನು ಮಾಡಿ ಕೊಂಡನು. ಎಫ್. ಎಫ್. ಬ್ರೂಸ್ ಹೀಗೆ ಬರೆದಿದ್ದಾರೆ,

> ತ್ರೋವದಲ್ಲಿ ಪ್ರಯಾಣಿಕರೂ ಹಾಗೂ ಆ ಬಂದರದಲ್ಲಿ ನೆಲೆಸಿದ್ದ ಜೊತೆ ಕ್ರೈಸ್ತರೂ "ವಾರದ ಮೊದಲನೆಯ ದಿನದಂದು" ರೊಟ್ಟಿ ಮುರಿಯಲು ಒಂದಾಗಿ ಕೂಡಿ ಬಂದರು ಎಂಬ ಹೇಳಿಕೆಯು, ಆ ದಿನದಂದು ಆರಾಧನೆಗಾಗಿ ಒಟ್ಟಾಗಿ ಕೂಡಿ ಬರುವ ಕ್ರೈಸ್ತ ಆಚರಣೆಗೆ ಒಂದು ಪುರಾತನ ಸ್ಪಷ್ಟವಾದ ಪುರಾವೆಯಾಗಿದೆ.[2]

ಸೈಮನ್ ಜೆ. ಕಿಸ್ಟಿಮಾಕರ್ ಒಪ್ಪಿಕೊಳ್ಳುತ್ತಾರೆ:

> "ವಾರದ ಮೊದಲನೆಯ ದಿನದಂದು" (ಅಂದರೆ, ಭಾನುವಾರ; ಇದು ಭಾನುವಾರದ ಆರಾಧನೆಗೆ ಹೊಸ ಒಡಂಬಡಿಕೆಯ ಪ್ರಥಮ ಉಲ್ಲೇಖವಾಗಿದೆ) ಕ್ರೈಸ್ತರು ಕರ್ತನ ಭೋಜನ ಆರಾಧನೆಗಾಗಿ ಕೂಡಿಬಂದರು, ಇದರ ನಂತರ ಸಮಾಜ ಭೋಜನ, "ಪ್ರೇಮ ಭೋಜನ" ಇರುತ್ತಿತ್ತು. ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ, ರೊಟ್ಟಿ ಮುರಿಯುವುದು ಎಂಬ ವ್ಯಕ್ತಪಡಿಸುವಿಕೆಯು ಕರ್ತನ ಭೋಜನ ಆಚರಿಸು ಎಂದರ್ಥ ಕೊಡುತ್ತಿತ್ತು. ...[3]

"ನಿಜವಾಗಿಯೂ, ಅಪೊಸ್ತಲರ ಕೃತ್ಯಗಳು 20:7ಎ ದಲ್ಲಿ ರೊಟ್ಟಿಮುರಿಯುವುದು ಎಂಬುದರಿಂದ ಬೇರೇನೂ ಅಲ್ಲ ಆದರೆ 'ಕರ್ತನ ಭೋಜನ' ಎಂದರ್ಥವಾಗುತ್ತದೆ" ಎಂದು ವಿಲ್ಲಿ ರೋರ್‌ಡೊರ್ಫ ಬರೆದಿದ್ದಾರೆ.[4]

J. W. McGarvey ಸರಿಯಾಗಿ ಬರೆದಿದ್ದಾರೆ:

> ವಾರದ ಮೊದಲನೆಯ ದಿನವು ಶಿಷ್ಯರು ರೊಟ್ಟಿ ಮುರಿದ ದಿನವಾಗಿತ್ತು; ಮತ್ತು ಆ ದಿನ ಅವರು ಕೂಟವಾಗಿ ಕೂಡಿ ಬಂದದ್ದರ ಪ್ರಮುಖ ಉದ್ದೇಶವು ಈ ಆಜ್ಞೆಯನ್ನು ಕೈಕೊಳ್ಳುವದಕ್ಕಾಗಿ ಇತ್ತೆಂದೂ ಈ ವಾಕ್ಯಭಾಗವು ತೋರಿಸುತ್ತದೆ. ಆ ಸಂಧರ್ಭದಲ್ಲಿ ಪೌಲನ ಪ್ರಸಂಗವು ಆಕಸ್ಮಿಕವಾದ್ದಾಗಿರುತ್ತಿತ್ತು. ಕರ್ತನ ಭೋಜನ ಸಂಸ್ಕಾರದ ಮೂಲ ಸ್ಥಾಪನೆಯಲ್ಲಿ ಅದು ಎಷ್ಟುಸಲ ಆಚರಿಸಬೇಕೆಂಬುದರ ಬಗ್ಗೆ ಏನೂ ಹೇಳಲ್ಪಟ್ಟಿರುವದಿಲ್ಲ. ಕರ್ತನ ವಾಕ್ಯಗಳು, "ಇದರಲ್ಲಿ ನೀವು ಪಾನಮಾಡುವಾಗೆಲ್ಲಾ ನನ್ನುನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನಮಾಡಿರಿ" ಎಂಬುದಾಗಿದ್ದವು [1 ಕೊರಿಂಥ 11:25]. ಹೆಚ್ಚಾಗಿ ಹೇಳಲ್ಪಡದಿದ್ದರೆ, ವಿಶ್ವಾಸಿಗಳ ಪ್ರತಿಯೊಂದು ಸಭೆಯು ಎಷ್ಟು ಸಲ ಆಚರಿಸಲ್ಪಡಬೇಕು ಎಂಬುದರ ಬಗ್ಗೆ ತಾನೇ ನಿರ್ಣಯಿಸಿಕೊಳ್ಳಬೇಕಾಗುತ್ತಿತ್ತು. ಕರ್ತನ ವೈಯಕ್ತಿಕ ಬೋಧನೆಯಿಂದ ಅನಿಶ್ಚಿತವಾಗಿ ಉಳಿಸಲ್ಪಟ್ಟ ಇತರ ವಿಷಯಗಳಲ್ಲಿಯಂತೆ, ಅಪೊಸ್ತಲರು ಅನಂತರದಲ್ಲಿ ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟರು, ಮತ್ತು ಅವರ ಉದಾಹರಣೆಯು ನಮ್ಮ ಮಾರ್ಗದರ್ಶನವಾಗಿದೆ. ವಿಷಯದ ಮೇಲೆ ಏನೂ ಹೇಳಲ್ಪಟ್ಟಿರುವದಿಲ್ಲ, ಆದರೆ ಈ ಅಪ್ಪಣೆಯು ವಾರದ ಆಚರಣೆಯ

ಪರವಾಗಿ ನಿರ್ದಿಷ್ಟವಾದದ್ದಾಗಿದೆ.[5]

ಕರ್ತನ ಭೋಜನಕ್ಕೆ ಸೂಚನೆಯಾದ, ರೊಟ್ಟಿ ಮುರಿಯುವ ವಿಶೇಷ ಆಚರಣೆಗಾಗಿ ಭಾನುವಾರದಂದು ಕ್ರೈಸ್ತರು ಕೂಡಿಬಂದರು ಎಂಬುದನ್ನು ಅಪೊಸ್ತಲರ ಕೃತ್ಯಗಳು 20:7 ಸ್ಪಷ್ಟವಾಗಿ ತೋರಿಸುತ್ತದೆ. ಆರಾಧನೆಗಾಗಿ ಅವರು ಬೇರೆ ಸಮಯಗಳಲ್ಲಿ ಕೂಡಿಬಂದರು, ಆದರೆ ಭಾನುವಾರವು ಒಂದು ವಿಶೇಷ ದಿನವಾಗಿತ್ತು, ಅವರ ಕರ್ತನ ದಿನವಾಗಿತ್ತು.

ಇನ್ನೊಂದು ವಾಕ್ಯವು ಕ್ರೈಸ್ತರು ಭಾನುವಾರ ಕೂಡಿಬಂದರು ಎಂಬುದನ್ನು ಸೂಚಿಸುತ್ತದೆ: "ಪರಿಶುದ್ಧರಿಗೋಸ್ಕರ ಹಣ ವಸೂಲು ಮಾಡುವದನ್ನು ಕುರಿತು ನಾನು ಹೇಳುವದೇನಂದರೆ, ಗಲಾತ್ಯದ ಸಭೆಗಳಿಗೆ ನಾನು ಹೇಳಿಕೊಟ್ಟ ಕ್ರಮದಂತೆ ನೀವೂ ಮಾಡಿರಿ. ನಾನು ಬಂದಾಗ ಹಣವಸೂಲು ಮಾಡಬೇಕಾದ ಅವಶ್ಯವಾಗದಂತೆ ನಿಮ್ಮಲ್ಲಿ ಪ್ರತಿಯೊಬ್ಬನೂ ತನ್ನ ಆದಾಯಕ್ಕೆ ತಕ್ಕಂತೆ ವಾರವಾರದ ಮೊದಲನೆಯ ದಿನದಲ್ಲಿ ಕೂಡಿಟ್ಟುಕೊಂಡಿರಬೇಕು" (1 ಕೊರಿಂಥ 16:1, 2).

ಈ ಹೇಳಿಕೆಯಿಂದ ನಾಲ್ಕು ನಿರ್ಣಯಗಳನ್ನು ಮಾಡಬಹುದು:

(1) ಪೌಲನು ಆಜ್ಞಾಪಿಸುತ್ತಿರುವ ರೂಢಿಯು ಕೊರಿಂಥದ ಸಭೆಗಾಗಿ ಮಾತ್ರವಲ್ಲದೇ, ಇತರ ಸಭೆಗಳಿಗಾಗಿಯೂ ಇತ್ತು.

(2) ಕೊರತೆಯಲ್ಲಿರುವವರಿಗಾಗಿ ಕಾಣಿಕೆ ಕೂಡಿಸುವುದು ಪ್ರತೀ ವಾರದ ಮೊದಲನೆಯ ದಿನದಲ್ಲಿ ಆಗಬೇಕು. ಹಾಗಾದರೆ ಪೌಲನು ಬಂದಾಗ ಅದನ್ನು ಕೂಡಿಸಲು ಸುತ್ತಲೂ ಹೋಗ ಬೇಕಾಗಿರುವದಿಲ್ಲ.

(3) ಭಾನುವಾರವು ಆಯ್ದುಕೊಳ್ಳಲ್ಪಟ್ಟಿತು ಯಾಕಂದರೆ ಆ ದಿನ ಕ್ರೈಸ್ತರು ಪರಸ್ಪರರಿಗೆ ಗೊತ್ತಾಗಿದ್ದ ಸ್ಥಳದಲ್ಲಿ ಕೂಡಿ ಬರುತ್ತಿದ್ದರು. ಅವರು ಒಟ್ಟಾಗಿ ಕೂಡಿ ಬಂದಾಗ, ಅವರು ಅಭಿವೃದ್ಧಿ ಹೊಂದಿದಂತೆ ಕೊಡಬಹುದಾಗಿತ್ತು.

(4) ವಾರದ ಮೊದಲನೆಯ ದಿನವು ಅವರು ಒಂದಾಗಿ ಕೂಡಿಬರುವಂತೆ ವಿಶೇಷವಾದ ಮಹತ್ವವುಳ್ಳ ದಿನವಾಗಿದ್ದಿರಬೇಕು; ಇಲ್ಲದಿದ್ದರೆ, ಇನ್ನೊಂದು ದಿನವು ಆಯ್ದುಕೊಳ್ಳಬಹುದಿತ್ತು.

## ಕರ್ತನ ದಿನ

ಪ್ರಕಟನೆ 1:10ರಲ್ಲಿ "ಕರ್ತನ ದಿನ" ಎಂಬುದನ್ನು ಯೋಹಾನನು ಉಪಯೋಗಿಸಿದ್ದು, ಯೇಸುವನ್ನು ಗೌರವಿಸಲಿಕ್ಕೆ ಆದಿ ಸಭೆಯಲ್ಲಿ ಒಂದು ವಿಶೇಷ ದಿನವಿತ್ತೆಂಬುದನ್ನು ತೋರಿಸುತ್ತದೆ. "Lord's day" "ಕರ್ತನ ದಿನ" ಎಂಬ ವ್ಯಕ್ತ ಪಡಿಸುವಿಕೆಯು (ಗ್ರೀಕ: *te kuriake* [or kyriake] *hemera*) "day of Lord" (ಗ್ರೀಕ: *hemera tou kuriou*) ದಂತೆ ಒಂದೇ ಯಾಗಿರುವದಿಲ್ಲ. ಇದು ದೇವರು ತನ್ನ ಪ್ರತೀಕಾರವನ್ನು ಸಾಧಿಸಲು ಹಾಗೂ ನಾಶನವನ್ನು ತರಲು ತನ್ನ ರೋಷವನ್ನು ದೇವರು ತೋರಿಸುವ ಯಾವುದೇ ದಿನಕ್ಕೆ ಉಪಯೋಗಿಸಲ್ಪಟ್ಟಿದೆ (2 ಪೇತ್ರ 3:10).

ಷಷ್ಟಿ ವಿಭಕ್ತಿಯ ನಾಮ ಪದವಾಗದೆ *kuriake* ಎಂಬುದು ವಿಶೇಷಣವಾಗಿದ್ದು, ಕರ್ತನ ಮಹಿಮೆಗಾಗಿ ಒಂದು ದಿನ ಎಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. "ಧ್ವಜ ದಿನ," "ಚಕ್ರವರ್ತಿಯ ದಿನ" ಮತ್ತು "ಸ್ವಾತಂತ್ರ್ಯದ ದಿನ" ಎಂದು ಉಪಯೋಗಿಸುವಂತೆ ಇದು ಇರುತ್ತದೆ; ವಿಶೇಷಣಗಳಂತೆ ಉಪಯೋಗಿಸಿದ ನಾಮಪದಗಳು,

ಅಂಥ ದಿನಗಳು ಧ್ವಜನದ, ಚಕ್ರವರ್ತಿಯ ಇಲ್ಲವೇ ಸ್ವಾತಂತ್ರ್ಯದ ಗೌರವಾರ್ಥ ಪ್ರತ್ಯೇಕಿಸಲ್ಪಟ್ಟಿವೆ ಎಂಬುದನ್ನು ತೋರಿಸುತ್ತವೆ.

"Lord day" (ಷಷ್ಠಿ ವಿಭಕ್ತಿಯ ರೂಪ ಅಗತ್ಯವಿಲ್ಲ ಯಾಕಂದರೆ ಇದು ವಿಶೇಷಣವಾಗಿದೆ) ಇಲ್ಲವೇ "imperial day" (Interlinear ಆವೃತ್ತಿಯಲ್ಲಿ ಭಾಷಾಂತರಿಸಲ್ಪಟ್ಟಂತೆ)[6] ಎಂಬುದು ಕರ್ತನ ಗೌರವಕ್ಕಾಗಿ ಹಾಗೂ ಆತನ ಜ್ಞಾಪಕಕ್ಕಾಗಿ ಪ್ರತ್ಯೇಕಿಸಲ್ಪಟ್ಟ ವಿಶೇಷ ದಿನವಾಗಿದೆ. ಇದು ಯೆಹೂದ್ಯರ ಸಬ್ಬತ್‌ನ ಹಾಗೆ, ಐಗುಪ್ತದಲ್ಲಿಯ ಗುಲಾಮಗಿರಿಯಿಂದ ಬಿಡುಗಡೆಯಾದದ್ದರ ಜ್ಞಾಪಕಾರ್ಥವಾಗಿ ವಿಶ್ರಾಂತಿಗಾಗಿ ಪ್ರತ್ಯೇಕಿಸಲ್ಪಟ್ಟ ದಿನವಾಗಿರುವದಿಲ್ಲ.

ವಿಶೇಷಣ "Lord," *kuriake*ಯು, ಹೊಸ ಒಡಂಬಡಿಕೆಯಲ್ಲಿ ಕೇವಲ ಒಮ್ಮೆ ಇನ್ನೊಂದು ಸಲ ಕಂಡು ಬರುತ್ತದೆ ಹಾಗೂ ಕರ್ತನ ಗೌರವಕ್ಕಾಗಿ ಮತ್ತು ಜ್ಞಾಪಕಕ್ಕಾಗಿ ಇರುವ ಭೋಜನಕ್ಕೆ ಸಂಬಂಧಿಸಿದೆ (1 ಕೊರಿಂಥ 11:20-26). ಈ ಭೋಜನವು ಆತನ ಗೌರವಕ್ಕಾಗಿ ಪ್ರತ್ಯೇಕಿಸಿದ ವಿಶೇಷವಾದ ದಿನದಂದು ಆಚರಿಸಲ್ಪಡುತ್ತಿತ್ತು.

*Te kuriake hemera* ಎಂಬುದು ಹೊಸ ಒಡಂಬಡಿಕೆಯ ಹೊರಗೆ ಭಾನುವಾರಕ್ಕೆ ಮಾತ್ರವೇ, ವಾರದ ಮೊದಲನೆಯ ದಿನಕ್ಕೆ ಮಾತ್ರವೇ ಉಪಯೋಗಿಸಲ್ಪಟ್ಟಿದೆ. ಪ್ರಕಟನೆ 1:10ರಲ್ಲಿ ಯೋಹಾನನು ಭಾನುವಾರ, ವಾರದ ಮೊದಲನೆಯ ದಿನದಂದು ದೇವರ ಆತ್ಮ ಭರಿತನಾಗಿದ್ದನೆಂಬ ಸಂಗತಿಗೆ ಬಲಕೊಡುತ್ತದೆ. ಇದು ಯೇಸುವು ಪುನರುತ್ಥಾನ ಹೊಂದಿದ ವಾರದ ದಿನವಾಗಿತ್ತು (ಮತ್ತಾಯ 28:1; ಮಾರ್ಕ 16:1, 2; ಲೂಕ 24:1) ಮತ್ತು ಕ್ರೈಸ್ತರು ಕೂಡಿಬಂದ ದಿನವಾಗಿತ್ತು.

## ಆದಿ ಕ್ರೈಸ್ತರ ಸಾಹಿತ್ಯ

ಹೆಚ್ಚಾದ ಪಂಡಿತರು "ಕರ್ತನ ದಿನವು" ಭಾನುವಾರಕ್ಕೆ ಸಂಬಂಧಿಸಿದೆಯೆಂದು ತೀರ್ಮಾನಿಸುತ್ತಾರೆ. ಎರಡನೆ ಶತಮಾನದ ಸಾಹಿತ್ಯದಲ್ಲಿ ಈ ಮಾತಿನ ಹೆಚ್ಚು ಸಲದ ಉಪಯೋಗವು ಭಾನುವಾರಕ್ಕೆ ಸಂಬಂಧಿಸಿದ್ದರಿಂದ ಈ ತೀರ್ಮಾನಕ್ಕೆ ಬಂದಿರುವರು.[7] ಉದಾಹರಣೆಯಾಗಿ ಸುಮಾರು ಕ್ರಿ.ಶ. 180ರಲ್ಲಿ ಬರೆಯಲ್ಪಟ್ಟ *Gospel of Peter* ಎಂಬುದು ಈ ಹೇಳಿಕೆಯನ್ನು ಒಳಗೊಂಡಿರುತ್ತದೆ, "ಮಗ್ದಲದ ಮರಿಯಳು ... ಸಮಾಧಿಗೆ ಬಂದಳು."[8] ಸುಮಾರು ಕ್ರಿ.ಶ. 190ರಲ್ಲಿ ಅಲೆಕ್ಸಾಂಡ್ರಿಯದ ಕ್ಲೆಮೆಂಟನು ಹೀಗೆ ಬರೆದನು, "ಸುವಾರ್ತೆಗನುಗುಣವಾಗಿ ಅವನು ಆಜ್ಞೆಯನ್ನು ಮಾಡುವನು ಮತ್ತು ಕರ್ತನ ದಿನವನ್ನು ಕೈಕೊಳ್ಳುವನು, ದುಷ್ಟಮನಸ್ಸನ್ನು ತೆಗೆದು ಹಾಕುವಾಗಲೆಲ್ಲಾ, ... ತನ್ನಲ್ಲಿ ಕರ್ತನ ಪುನರುತ್ಥಾನವನ್ನು ಮಹಿಮೆ ಪಡಿಸುವನು."[9]

ಯೇಸುವಿನ ಪುನರುತ್ಥಾನದ ನಂತರ ಆತನ ಕಾಣಿಸಿಕೊಳ್ಳುವಿಕೆಯಲ್ಲಿ ನೋಡಿದಂತೆ, ಭಾನುವಾರವು ವಿಶೇಷವಾದ ದಿನವಾಗಿತ್ತು.

> ಆತನ ಪುನರುತ್ಥಾನದ ನಂತರ ಎಂಟು ಕಾಣಿಸುವಿಕೆಗಳಲ್ಲಿ ಆರು ಕಾಣಿಸಿಕೊಳ್ಳುವಿಕೆಗಳು ಸುವಾರ್ತೆಗಳಲ್ಲಿ ದಾಖಲೆಯಾದವುಗಳು ಭಾನುವಾರ ಸಂಭವಿಸಿದವು: (1) ಮಗ್ದಲದ ಮರಿಯಳಿಗೆ (ಯೋಹಾನ 20:11-18); (2) ಆತನ ದೇಹಕ್ಕೆ ಹಚ್ಚಲು ಸುಗಂಧಗಳನ್ನು ತಂದ ಮಹಿಳೆಯರಿಗೆ (ಮತ್ತಾಯ 28:7-10) (3) ಎಮ್ಮಾಹುವಿನ ದಾರಿಯಲ್ಲಿ ಇಬ್ಬರು ಶಿಷ್ಯರಿಗೆ (ಲೂಕ 24:13-33); (4) ಸೀಮೋನ ಪೇತ್ರನಿಗೆ (24:34); (5) ತೋಮನು ಇಲ್ಲದಾಗ ಹತ್ತು ಜನ ಶಿಷ್ಯರಿಗೆ (ಯೋಹಾನ 20:19-23; ಹೋಲಿಸು ಲೂಕ 24:36-49); ಮತ್ತು (6) ತೋಮ ಇದ್ದಾಗ

ಹನ್ನೊಂದು ಜನ ಶಿಷ್ಯರಿಗೆ (ಯೋಹಾನ 20:24-29).[10]

ಇತರ ಮಹತ್ವದ ಘಟನೆಗಳು ಭಾನುವಾರದಂದು ನಡೆದವು. ಪಸ್ಕ ಹಬ್ಬದ ನಂತರ ಭಾನುವಾರದಂದು ಯೇಸುವು ಪುನರುತ್ಥಾನವಾದನು (ಮತ್ತಾಯ 28:1). ಪಂಚಾಶತ್ತಮ ಹಬ್ಬವು ಐವತ್ತು ದಿನಗಳ ನಂತರ ಪ್ರಾರಂಭವಾಯಿತು (ಯಾಜಕಕಾಂಡ 23:15, 16) ಅಂದರೆ ಭಾನುವಾರದಂದು, ಪಂಚಾಶತ್ತಮ ದಿನದಂದು ಸಭೆಯು ಸ್ಥಾಪಿಸಲ್ಪಟ್ಟಿತು ಹಾಗೂ ಪರಿಶುದ್ಧಾತ್ಮನು ಸುರಿಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 2:1-4).

ಯೇಸುವಿನ ಗೌರವಕ್ಕಾಗಿ ಮತ್ತು ಜ್ಞಾಪಕಾರ್ಥವಾಗಿ ಕೂಡಿಬರಲು ಕ್ರೈಸ್ತರಿಗೆ "ಕರ್ತನ ದಿನವು" ವಿಶೇಷ ದಿನವಾಗಿತ್ತೆಂದು ಪುರಾವೆಗಳ ಭಾರವು ಸೂಚಿಸುತ್ತದೆ. ಈ ಮಾತು ಭಾನುವಾರವನ್ನು. ವಾರದ ಮೊದಲನೆಯ ದಿನವನ್ನು ಉಲ್ಲೇಖಿಸಲು ಆದಿ ಬರಹಗಾರರಿಂದ ಉಪಯೋಗಿಸಲ್ಪಟ್ಟಿತು.

## ಐತಿಹಾಸಿಕ ಪುರಾವೆ

ಅಪೊಸ್ತಲರ ಸಮಯದ ನಂತರ ಕೂಡಲೇ ಬರೆದವರು ಆದಿ ಸಭೆಯ ಭಾನುವಾರ ದಂದು, ವಾರದ ಮೊದಲನೆಯ ದಿನದಂದು, ಕೂಡಿಬರಲು ಒಂದು ವಿಶೇಷವಾದ ದಿನದಂತೆ, ಆದಿ ಸಭೆಯು ಆರಾಧಿಸಿತೆಂಬುದನ್ನು ದೃಢಪಡಿಸಿದರು. ಇವರು ಎರಡನೆ - ಶತಮಾನದ ಬರಹಗಾರರು (ಕ್ರಿ. ಶ. 101-200):

> (1) ಇಗ್ನೆಶಿಯಸ್‌ನು ಹೊಸ ನಿರೀಕ್ಷೆಯನ್ನು ಹೊಂದಿಕೊಂಡು, ಸಬ್ಬತ್‌ನ್ನು ಆಚರಿಸಿದವರನ್ನು [ಅಕ್ಷರಶಃವಾಗಿ, *"sabbathing"*] ಆದರೆ "ಕರ್ತನ ದಿನ"ಕ್ಕೆ ಅನುಗುಣವಾಗಿ ಜೀವಿಸುವವರನ್ನು, [ಗ್ರೀಕ. *kuriake* "ದಿನ"ಕ್ಕಾಗಿ ಪದವಿಲ್ಲದೆ] ಅದರ ಮೇಲೆ ಆತನ ಮತ್ತು ಆತನ ಮರಣದ ಮುಖಾಂತರ ನಮ್ಮ ಜೀವನ ಉತಯವಾದ" ಜನರ ಬಗ್ಗೆ ಉಲ್ಲೇಖಿಸುತ್ತಾನೆ *(Magn. 9:1)*. *kuriake* ಇಲ್ಲಿ, ಪ್ರಕಟನೆ 1:10ರಲ್ಲಿ ಉಪಯೋಗಿಸಿದ ಮಾತಿನ ಸಂಕುಚಿತಗೊಳಿಸಿದ್ದರ ರೂಪ ವಾಗಿದೆ ಎಂದು ತೋರುತ್ತದೆ, ಮತ್ತು ಈ ಸಂಗತಿಯು ಸಂದರ್ಭದೊಂದಿಗೆ ವಾಕ್ಯಭಾಗವನ್ನು ಭಾಷಾಂತರಿಸುವದರಲ್ಲಿ "ದಿನ" ಎಂಬ ಪದವನ್ನು ಉಪಯೋಗಿಸಲು ನಡಿಸುತ್ತದೆ. ಈ ಹಿನ್ನೆಲೆಯಲ್ಲಿ ಇಗ್ನೆಶಿಯಸ್‌ನು ನಿರ್ದಿಷ್ಟ ವಾಗಿ ಆರಾಧನೆಯನ್ನು ನಮೂದಿಸುವದಿಲ್ಲ. (2) Did. 14:1 ಎಂಬುದು ಕ್ರೈಸ್ತ ಆರಾಧನೆಗಾಗಿ Kyriake kyriou "Lord's [Day] of the Lord" ಎಂಬ ಹಳೇ ವ್ಯಕ್ತಪಡಿಸುವಿಕೆಯನ್ನು ಉಪಯೋಗಿಸುತ್ತದೆ, ಆದರೆ ಈ ಸಂದರ್ಶವನ್ನು ಸಬ್ಬತ್‌ನೊಂದಿಗೆ ವಿರೋಧಿಸುವದಿಲ್ಲ. (3) ಹಾಗೆಯೇ, ಪ್ಲೀನಿ ಎಂಬವನು ಟ್ರಾಜನ್‌ನಿಗೆ ಬರೆದ ತನ್ನ ಪ್ರಸಿದ್ಧ ಪತ್ರದಲ್ಲಿ (*Ep. x.*96) ನಿರ್ಧರಿಸಲ್ಪಟ್ಟ ದಿನದಂದು ಕ್ರೈಸ್ತರು ಸಂಗೀತವನ್ನು ಹಾಡಲು (ಇಲ್ಲವೇ ಪದಗಳನ್ನು ಒಂದು ರೂಪನ್ನು ಹಾಡಲು) ಕೂಡಿ ಬರುತ್ತಾರೆ ಎಂದು ಹೇಳಿದ್ದಾನೆ, ಆದರೆ ದಿನವನ್ನ ಸ್ಪಷ್ಟಪಡಿಸುವದಲ್ಲಿ. (4) Barn. 15:9 ಎಂಬುದು ಪ್ರಥಮ ದಿನದ ಮಹತ್ವವನ್ನು ಹೇಳುತ್ತದೆ (ಹಳೇ ಸೃಷ್ಟಿಯ ಎಂಟನೆಯ ದಿನವೆಂದು ಕರೆಯುತ್ತದೆ), ಆದರೆ *Kyriake* ಎಂಬ ಮಾತನ್ನು ಉಪಯೋಗಿಸುವದಿಲ್ಲ. ಒಟ್ಟಾಗಿ ತೆಗೆದು ಕೊಂಡಾಗ ಮಾತ್ರವೇ ಈ ವಾಕ್ಯಗಳು ಆದಿ ಕ್ರೈಸ್ತರು ಆರಾಧನೆಗಾಗಿ ವಾರದ ಮೊದಲನೆಯ ದಿನದಂದು, ಪುನರುತ್ಥಾನದ ದಿನದಂದು ಕೂಡಿಬಂದರೆಂಬುದನ್ನು

ಅನ್ವಯಿಸುತ್ತವೆ.[11]

ಇಗ್ನೆಶಿಯಸ್‌ನು, ಬಹುಶಃ ಅಪೊಸ್ತಲ ಯೋಹಾನನ ಶಿಷ್ಯನಾಗಿದ್ದು, *Magnesians*ದ ಗ್ರಂಥ ಕರ್ತನಾಗಿದ್ದನು. ಪ್ಲಿನಿಯು ಕ್ರೈಸ್ತನಾಗಿರಲಿಲ್ಲ, ಆದರೆ ಟ್ರಾಜನ ಚಕ್ರವರ್ತಿಯ ಅಧೀನತೆಯಲ್ಲಿ ಪೊಂತ ಮತ್ತು ಬೀಥೂನಿಯದ ರೋಮನ್ ರಾಜಪಾಲನಾಗಿ ಕ್ರೈಸ್ತ ಚಟುವಟಿಕೆಯನ್ನು ತಿಳಿದವನಾಗಿದ್ದನು. ಎರಡನೆಯ ಶತಮಾನದ ಪ್ರಾರಂಭದಲ್ಲಿ ಕ್ರೈಸ್ತರನ್ನು ಕುರಿತು ಟ್ರಾಜನ್‌ನಿಗೆ ಒಂದು ಪತ್ರ ಬರೆದನು. "ಬೆಳಗಾಗುವದಕ್ಕೆ ಮೊದಲು ನಿಶ್ಚಿತವಾದ ಒಂದು ದಿನ ಕೂಟಕ್ಕಾಗಿ ಕೂಡಿ ಬರುವ ರೂಢಿಯಲ್ಲಿ ಅವರು ಇದ್ದರು" ಎಂದು ಮೊದಲು ಪ್ರಸ್ತಾಪ ಮಾಡಿದ್ದಕ್ಕೆ ಉಲ್ಲೇಖದ ಮೂಲಕವಾಗಿ ಈ ದಾಖಲೆ ಇರುತ್ತದೆ.[12]

ದಿದಾಖಿಯು *(Didache)* ಸುಮಾರು ಅದೇ ಸಮಯದಲ್ಲಿ ಬರೆಯಲ್ಪಟ್ಟಿದ್ದು ಹೀಗೆ ಹೇಳುತ್ತದೆ, "ಮತ್ತು ಕರ್ತನ ಸ್ವಂತ ದಿನದಂದು ನೀವು ಒಟ್ಟಾಗಿ ಕೂಡಿ ಬನ್ನಿರಿ ಮತ್ತು ರೊಟ್ಟಿಯನ್ನು ಮುರಿಯಿರಿ ಹಾಗೂ ಕೃತಜ್ಞತಾಸ್ತುತಿ ಮಾಡಿರಿ, ಮೊದಲು ನಿಮ್ಮ ಅಪರಾಧಗಳನ್ನು ಅರಿಕೆ ಮಾಡಿರಿ, ನಿಮ್ಮ ಯಜ್ಞ ಶುದ್ಧವಾಗಿರುವುದು."[13]

ಕಲ್ಪಿತ ಹೆಸರಿನಿಂದ ಬರೆಯಲ್ಪಟ್ಟ ಬಾರ್ನಬನ ಪತ್ರಿಕೆಯೂ ಸಹ ಎರಡನೆಯ ಶತಮಾನದ ಪ್ರಾರಂಭದಲ್ಲಿ ಬರೆಯಲ್ಪಟ್ಟಿತು. ಅದರಲ್ಲಿ ಈ ಹೇಳಿಕೆಯಿದೆ: "ಆದುದರಿಂದ ಆನಂದಿಸುವದಕ್ಕಾಗಿ ಎಂಟನಯೆ ದಿನವನ್ನು ಆಚರಿಸುತ್ತಿರುವೆವು, ಆ ದಿನದಲ್ಲಿ ಯೇಸುವೂ ಸತ್ತವರೊಳಗಿಂದ ಎದ್ದು ಬಂದನು. ..."[14] ಕ್ರೈಸ್ತ ಜಸ್ಟಿನ್ ಮಾರ್ಟ್ಯರನು ಅದು ಎಂಟನೆಯ ದಿನವೆಂದು ಯಾಕೆ ಕರೆಯಲ್ಪಟ್ಟಿದೆ ಎಂದು ವಿವರಿಸಿದ್ದಾನೆ: "ವಾರದ ಮೊದಲನೆಯ ದಿನವು, ಅದು ಎಲ್ಲಾ ದಿನಗಳ ಮೊದಲನೆಯದಾಗಿದ್ದರೂ ಒಂದು ಸುತ್ತಿನಲ್ಲಿ ದಿನಗಳ ಸಂಖ್ಯೆಗನುಗುಣವಾಗಿ (ಮೊದಲನೆಯದಾಗಿ ಇನ್ನೂ ಉಳಿದಿದ್ದರೂ) ಎಂಟನೆಯದು ಎಂದು ಕರೆಯಲ್ಪಟ್ಟಿದೆ."[15]

ಜಸ್ಟಿನನು ಸುಮಾರು ಎರಡನೆಯ ಶತಮಾನದ ಮಧ್ಯದಲ್ಲಿ ಕ್ರೈಸ್ತ ಅಸೆಂಬ್ಲಿಗಳನ್ನು ಕುರಿತು ಬರೆದನು,

> ಭಾನುವಾರ ಎಂದು ಕರೆಯಲ್ಪಡುವ ದಿನದಂದು ಒಂದು ಪಟ್ಟಣದಲ್ಲಿ ಇಲ್ಲವೇ ಒಂದು ಗ್ರಾಮ ಜಿಲ್ಲೆಯಲ್ಲಿ ವಾಸಿಸುತ್ತಿದ್ದ ಎಲ್ಲರು ಒಂದೇ ಸ್ಥಳದಲ್ಲಿ ಒಂದಾಗಿ ಕೂಡಿಬರುವುದು ಇತ್ತು, ಅಪೊಸ್ತಲರ ವೃತ್ತಾಂತಗಳು ಇಲ್ಲವೇ ಪ್ರವಾದಿಗಳ ಬರಹಗಳು ಸಮಯಾವಕಾಶ ಇರುವವರೆಗೆ ಓದಲ್ಪಡುತ್ತಿದ್ದವು.[16]
>
> ಆದರೆ ಭಾನುವಾರವು ನಾವು ಒಂದಾಗಿ ಕೂಡಿ ಬರುವ ದಿನವಾಗಿತ್ತು, ಯಾಕಂದರೆ ದೇವರು ಕತ್ತಲೆಯಲ್ಲಿ ಭೌತಿಕ ವಸ್ತುವಿನಲ್ಲಿ ಬದಲಾವನೆಯನ್ನು ತಂದು ಜಗತ್ತನ್ನು ಉಂಟುಮಾಡಿದ ಮೊದಲನೆಯ ದಿನವಾಗಿತ್ತು; ಮತ್ತು ನಮ್ಮ ರಕ್ಷಕನಾದ, ಯೇಸುಕ್ರಿಸ್ತನು ಅದೇ ದಿನದಲ್ಲಿ ಸತ್ತವರೊಳಗಿಂದ ಎದ್ದು ಬಂದನು.[17]

ಈ ದಿನದಂದು ಅವರಲ್ಲಿ "ಪ್ರತಿಯೊಬ್ಬನು ತಾನು ಆಯ್ದುಕೊಂಡಷ್ಟನ್ನು" ಕೊಟ್ಟರು ಎಂದು ಅವನು ಬರೆದಿದ್ದಾನೆ.[18] ಇದು ಕ್ರೈಸ್ತರು ಸಬ್ಬತ್ ದಿನದಂದು ಆರಾಧಿಸಲಿಲ್ಲ ಮತ್ತು ಹಳೇ ಒಡಂಬಡಿಕೆ ಆಜ್ಞಾಪಿಸಿದಂತೆ ದಶಮಾಂಶವನ್ನು ಕೊಡಲಿಲ್ಲ ಎಂಬುದನ್ನು ಸೂಚಿಸುತ್ತದೆ.

"ಸಮಯಾವಕಾಶವಿದ್ದಂತೆ" ಎಂಬ ಜಸ್ಟಿನ್‌ನ ಹೇಳಿಕೆಯು ಕ್ರೈಸ್ತರು ಒಂದಾಗಿ ಕೂಡಿ ಬಂದನಂತರ ಕೆಲಸಕ್ಕೆ ಹೋಗ ಬೇಕಾಗಿದ್ದುದರಿಂದ ಅವರು ಉದಯಕ್ಕಿಂತ ಮೊದಲು ಕೂಡಿಬರುವದರಲ್ಲಿ ಮಿತಿಗೊಂಡಿದ್ದರು ಎಂಬುದನ್ನು ಸೂಚಿಸುತ್ತದೆ. ಅವರು ಯೆಹೂದಿ ಸಬ್ಬತ್ ದಿನದಂದು ಆರಾಧಿಸಿದ್ದರೆ, ಅವರು ಕೆಲಸಕ್ಕೆ ಹೋಗಬೇಕಾಗಿ ರುತ್ತಿರಲಿಲ್ಲ, ಆದರೆ ಸಮಯದ ನಿರ್ಬಂಧವಿಲ್ಲದೆ ಇಡೀ ದಿನ ಸಂಪೂರ್ಣವಾಗಿ ಸಮಯವಿರುತ್ತಿತ್ತು.

ತನ್ನ *Dialogue With Trypho*ದಲ್ಲಿ ಜಸ್ಟಿನ್ ಹೀಗೆ ಬರೆದಿದ್ದಾರೆ, "ನನ್ನ ಸ್ನೇಹಿ ತರೇ, ನಮ್ಮನ್ನು ದೂರಲಿಕ್ಕೆ ಬೇರೆ ಯಾವ ಸಂಗತಿಯೂ ಇರುವದಿಲ್ಲ, ಇದಕ್ಕಿಂತ ಯಾವುದಾದರೂ ಇದೆಯೋ? ನಿಮ್ಮ ಪೂರ್ವಜರಂತೆ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ನಾವು ಜೀವಿಸುವದಿಲ್ಲ, ಶರೀರದಲ್ಲಿ ಸುನ್ನತಿಯುಳ್ಳವರಾಗಿರುವದಿಲ್ಲ. ಇಲ್ಲವೇ ನಿಮ್ಮ ಹಾಗೆ ಸಬ್ಬತ್ ಆಚರಿಸುವದಿಲ್ಲ."[19]

ಕೊರಿಂಥದ ಬಿಷಪ್, ಡಿಯೊನಿಸಿಯಸನು, ಕ್ರಿ.ಶ. 170ರಲ್ಲಿ ರೋಮ್ ಸಭೆಗೆ ಒಂದು ಪತ್ರ ಬರೆದನು. "ಇಂದು ನಾವು ಕರ್ತನ ಪರಿಶುದ್ಧ ದಿನವನ್ನು ಆಚರಿಸಿದ್ದೇವೆ, ಅದರಲ್ಲಿ ನಿಮ್ಮ ಪತ್ರಿಕೆಯನ್ನು ಓದಿದೆವು."[20]

ಲಿಯೋನ್ಸದ ಬಿಷಪ್, ಐರೇನಿಯಸ್‌ನು ಕ್ರಿ.ಶ. 178ರಲ್ಲಿ ರೋಮ್‌ದ ಬಿಷೋ ಪನಿಗೆ ಬರೆದನು, ಅದರಲ್ಲಿ "ಕರ್ತನ ದಿನದಂದು ಮಾತ್ರವೇ ನಮ್ಮ ಕರ್ತನ ಪುನರುತ್ಥಾನದ ರಹಸ್ಯವನ್ನು ಆಚರಿಸುವ" ಕರ್ತವ್ಯವನ್ನು ಕಾಪಾಡಿಕೊಳ್ಳುವದರ ಬಗ್ಗೆ ಬರೆದನು.[21] ಒಬ್ಬ ಗ್ರಂಥ ಕರ್ತನು ಹೀಗೆ ಮುಕ್ತಾಯ ಗೊಳಿಸಿದ್ದಾನೆ,

> ಈ ಸಾಕ್ಷಿಗಳು [ಎರಡನೆಯ ಶತಮಾನದಲ್ಲೆಲ್ಲಾ] ಕ್ರಿಸ್ತನ ಪುನರುತ್ಥಾನದ ಸ್ಮರಣಾರ್ಥವಾಗಿ ಭಾನುವಾರವು ಕ್ರೈಸ್ತ ಆರಾಧನೆಯಂತೆ ಆಚರಿಸಲ್ಪಟ್ಟಿತೆಂದು ತೋರಿಸುತ್ತದೆ. ಈ ಸಮಯದಲ್ಲಿ ಭಾನುವಾರವು ವಿಶ್ರಾಂತಿಯ ದಿನದಂತೆ ಆಚರಿಸಲ್ಪಟ್ಟಿತೆಂಬುದಕ್ಕೆ ಇಲ್ಲವೇ ಯೆಹೂದಿ ಸಬ್ಬತ್ ಆಚರಣೆಯೊಂದಿಗೆ ಯಾವದೇ ರೀತಿಯಲ್ಲಿ ಸಂಬಂಧಿಸಿತ್ತೆಂಬುದಕ್ಕೆ ಯಾವುದೇ ಸೂಚನೆಯಿರಲಿಲ್ಲ.[22]

ಮೂರನೆಯ ಶತಮಾನದಿಂದ (201-300) ವಾರದ ಮೊದಲನೆಯ ದಿನ, ಭಾನುವಾರ ಕೂಡಿಬರುತ್ತದೆಂಬುದಕ್ಕೆ ಬಲವಾದ ಪುರಾವೆಯಿದೆ.

ಟೆರ್ಟುಲ್ಲಿಯನ್, ಸುಮಾರು ಕ್ರಿ.ಶ. 201ರಲ್ಲಿ, ಹೀಗೆ ಹೇಳಿದನು, "ಇತರರು ... ಸೂರ್ಯನು ಕ್ರೈಸ್ತರ ದೇವರು ಎಂದು ತಿಳಿಯುತ್ತಾರೆ, ಯಾಕಂದರೆ ಭಾನುವಾರವನ್ನು ನಾವು ಹಬ್ಬದ ದಿನವನ್ನಾಗಿ ಮಾಡುವೆವೆಂದು ಬಹಳ ಪ್ರಸಿದ್ಧವಾಗಿರುವ ಸಂಗತಿಯಾಗಿದೆ"[23] "ಸಬ್ಬತ್‌ಗಳು ನಮಗೆ ಪರಕೀಯವಾದವುಗಳಾಗಿವೆ" ಎಂದೂ ಹೇಳಿದನು.[24]

ಸುಮಾರು ಕ್ರಿ.ಶ. 200ರ ಸುಮಾರಿಗೆ ಬಾರ್ಡೆಸೇನಸ್ ಹೀಗೆ ಬರೆದರು, "ಒಂದುದಿನ, ವಾರದ ಮೊದಲನೆಯ ದಿನ, ನಾವು ಒಟ್ಟಾಗಿ ಕೂಡಿ ಬರುತ್ತೇವೆ. ..."[25]

*"The Teaching of the Apostles,"* ಎಂಬುದು ಮೂರನೆಯ ಶತಮಾನ ಕೊನೆಯ ಭಾಗದಲ್ಲಿ ಬರೆಯಲ್ಪಟ್ಟದ್ದು, ಈ ನಿರ್ದೇಶನವನ್ನು ದಾಖಲೆ ಮಾಡಿರುತ್ತದೆ:

> ಅಪೊಸ್ತಲರು ಇನ್ನೂ ನೇಮಕ ಮಾಡಿದರು: ವಾರದ ಮೊದಲನೆಯ ದಿನದಂದು

> ಆರಾಧನೆ ಇರಲಿ, ಪರಿಶುದ್ಧ ಬರಹಗಳ ವಾಚನವಿರಲಿ, ಮತ್ತು ಆಚರಣೆಯಿರಲಿ [ಭೋಜನದಲ್ಲಿ ಭಾಗವಹಿಸುವುದು] ಇರಲಿ: ಯಾಕಂದರೆ ವಾರದ ಮೊದಲನೆಯ ದಿನ ನಮ್ಮ ಕರ್ತನು ಸತ್ತವರೊಳಗಿಂದ ಎದ್ದು ಬಂದನು. ಹಾಗೂ ವಾರದ ಮೊದಲನೆಯ ದಿನ ಆತನು ಪರಲೋಕಕ್ಕೆ ಏರಿಹೋದನು, ಮತ್ತು ವಾರದ ಮೊದಲನೆಯ ದಿನ ಕೊನೆಗೆ ಪರಲೋಕದ ದೂತರುಗಳೊಂದಿಗೆ ಕಾಣಿಸಿ ಕೊಳ್ಳುವನು.[26]

ಎಂಟನೆಯ ದಿನದಂದಿನ ಸುನ್ನತಿಯು ಎಂಟನೆಯ ದಿನದ ಆರಾಧನೆಗೆ ಮುನ್ಸೂಚನೆಯಾಗಿತ್ತು ಎಂದು ಕಾರ್ತೇಜಿನ ಬಿಷಪ್ ಸಿಪ್ರಿಯನ್ ಹೇಳಿದನು. ಮೊದಲನೆಯ ಮತ್ತು ಎರಡನೆಯ ಶತಮಾನಗಳಲ್ಲಿ ಭಾನುವಾರವು ಎಂಟನೆಯ ದಿನವೆಂದು ಎಣಿಸಲ್ಪಡುತ್ತಿತ್ತು (ಭಾನುವಾರ: 1 … ಶನಿವಾರ: 7, ಭಾನುವಾರ: 8). ಅವನು ಕ್ರಿ.ಶ. 253ರಲ್ಲಿ ಕಾರ್ತೇಜಿನ ಸಿನೋಡ ಪತ್ರಿಕೆಯಲ್ಲಿ ಹೀಗೆ ಬರೆದನು,

> "ಯಾಕಂದರೆ ಎಂಟನೆಯ ದಿನವು … ಯೇಸುವು ಪುನಃ ಎದ್ದು ಬರುವ ದಿನವಾಗಿತ್ತು … ಮತ್ತು ನಮಗೆ ಆತ್ಮನ ಸುನ್ನತಿಯನ್ನು ಕೊಡುವ ದಿನ, ಎಂಟನೆಯ ದಿನ, … ಕರ್ತನ ದಿನ, ಅದು ಅಕ್ಷರದಲ್ಲಿ ಕೊಡಲ್ಪಟ್ಟಿತು."[27]

ಈ ದೈವಘಟನೆಯ ಸಾಕ್ಷಿಗಳು ಕ್ರೈಸ್ತರು ಪ್ರಾರಂಭದಿಂದ ಭಾನುವಾರವನ್ನು ತಮ್ಮ ಆರಾಧನೆಯ ದಿನವೆಂದು ಉಪಯೋಗಿಸಿದರೆಂಬುದನ್ನು ತೋರಿಸುತ್ತದೆ. ಇಲ್ಲಿ ಉಲ್ಲೇಖಿಸಿದ ಎಲ್ಲಾ ಹೇಳಿಕೆಗಳು ಕೊನೊಸ್ಟಂಟೈನನು ಕ್ರಿ.ಶ. 306-37ರಲ್ಲಿ ರೋಮನ್ ಚಕ್ರವರ್ತಿಯಾಗುವ ಮೊದಲು ಬರೆಯಲ್ಪಟ್ಟವುಗಳಾಗಿವೆ. ಕ್ರೈಸ್ತ ಆರಾಧನೆಯು ಶನಿವಾರ ದಿಂದ ಭಾನುವಾರಕ್ಕೆ ಬದಲಾಯಿಸಲ್ಪಟ್ಟಿತು ಎಂದು ಹೇಳುವವರು ಅದಕ್ಕೆ ವಿರುದ್ಧ ವಾಗಿರುವ ಒತ್ತಾಯದ ಪುರಾವೆಯ ಎದುರಿನಲ್ಲಿ ಹಾಗೆ ಮಾಡಿದ್ದಾರೆ. ಅವನು ಕ್ರೈಸ್ತರು ಆರಾಧನೆ ಮಾಡಿದ ದಿನವನ್ನು ಸಬ್ಬತ್‌ನಿಂದ ಭಾನುವಾರಕ್ಕೆ ಬದಲಾಯಿಸಲಿಲ್ಲ; ಆದರೆ ಕ್ರಿ.ಶ. 321ರಲ್ಲಿ ಕ್ರೈಸ್ತರು ಆಗಲೇ ಆರಾಧಿಸುತ್ತಿರುವ ದಿನವು ಇಡೀ ಸಾಮ್ರಾಜ್ಯದಲ್ಲಿ ಎಲ್ಲಾ ದರ್ಮಗಳವರಿಂದ ಆರಾಧನೆಗಾಗಿ ಕ್ರಮಪ್ರಕಾರವಾದ ಸಾರ್ವಜನಿಕ ರಜಾದಿನ ವಾಗಬೇಕೆಂದು ಆಜ್ಞೆ ಹೊರಡಿಸಿದನು.

ಆದಿ ಸಭೆಯ ಬರಹಗಾರರಿಂದ ಉಲ್ಲೇಖಿಸಿದ ತರುವಾಯ, ಎವರೆಟ್ಟ್ ಫರ್ಗ್ಯೂಸನ್ ಹೀಗೆ ವ್ಯಾಖ್ಯಾನಿಸಿದ್ದಾರೆ, "ಆದಿ ಕ್ರೈಸ್ತರ ಆರಾಧನೆಯ ದಿನಕ್ಕಾಗಿ ಪುರಾವೆಯು ಸ್ಪಷ್ಟವಾದದ್ದೂ ತಪ್ಪಿಲ್ಲದ್ದೂ ಆಗಿದೆ. ಯೆಹೂದ್ಯರಂತೆ ಅವರು ಏಳನೆಯ ದಿನವನ್ನು, ಸಬ್ಬತ್ ದಿನವನ್ನು ಆಚರಿಸಲಿಲ್ಲ, ಆದರೆ ವಾರದ ಮೊದಲನೆಯ ದಿನ, ಕ್ರಿಸ್ತನ ಪುನರುತ್ಥಾನದ ದಿನ ಒಂದಾಗಿ ಕೂಡಿಬಂದವು."[28]

ಭಾನುವಾರ ಆರಾಧನೆ ಮಾಡುವದನ್ನು ಆಕ್ಷೇಪಿಸುವವರು ಅದು ತಪ್ಪೆಂದು ವಾದಿಸುತ್ತಾರೆ ಯಾಕಂದರೆ ಸೂರ್ಯ ದೇವರ ಗೌರವದಲ್ಲಿ ಆ ಹೆಸರಿದೆ ಎಂದು ಹೇಳುತ್ತಾರೆ, ಇದು ಸರಿಯಾದ ತರ್ಕವಾಗಿದ್ದರೆ, ಶನಿವಾರ ಆರಾಧಿಸುವುದೂ ತಪ್ಪಾಗಿರುತ್ತದೆ, ಯಾಕಂದರೆ ಆ ದಿನವು ರೋಮನ್ ವ್ಯವಸಾಯಿ ದೇವರು, ಸ್ಯಾಟುರ್ನನ ಗೌರವದಲ್ಲಿ ಹೆಸರು ಹೊಂದಿದೆ.

## ಮುಕ್ತಾಯ

ಲಭ್ಯವಿರುವ ಎಲ್ಲಾ ಐತಿಹಾಸಿಕ ಮಾಹಿತಿಯು ಪ್ರಾರಂಭದಿಂದಲೇ ಕ್ರೈಸ್ತರು ಭಾನುವಾರ, ವಾರದ ಮೊದಲನೆಯದಿನ, ರೊಟ್ಟಿ ಮುರಿಯುವದರಿಂದ ಮತ್ತು ದ್ರಾಕ್ಷಾರಸ ಕುಡಿಯುವದರಿಂದ ಯೇಸುವನ್ನು ಗೌರವಿಸಲು ಮತ್ತು ಜ್ಞಾಪಿಸಿಕೊಳ್ಳಲು ಕೂಡಿಬಂದರೆಂಬುದನ್ನು ತೋರಿಸುತ್ತದೆ. ಅವರು ಅದನ್ನು ಸಬ್ಬತ್ ದಿನದಂದು ಮಾಡಲಿಲ್ಲ. ಯೆಹೂದಿ (ಅನ್ಯರಲ್ಲಿ) ಕ್ರೈಸ್ತರು, ಇಸ್ರಾಯೇಲಿನಲ್ಲಿ ವಾಸಿಸಿದವರು ಮತ್ತು ವಿದೇಶಗಳಲ್ಲಿ ಚದರಿಹೋದ ಕೆಲವರು ಸಬ್ಬತ್ ದಿನ ವಿಶ್ರಾಂತಿ ಪಡೆದು ಕೊಳ್ಳುವದನ್ನು ಮುಂದುವರಿಸಿದರು; ಹೀಗಿದ್ದರೂ, ಹೀಗೆ ಮಾಡಿದವರೂ ಸಹ ಭಾನುವಾರ ಕರ್ತನ ಭೋಜನ ಆಚರಿಸಿದರು.

ವಿಲ್ಲಿ ರೊರ್‌ಡೊರ್ಫ ಸರಿಯಾಗಿ ತೀರ್ಮಾನಿಸಿದ್ದಾರೆ,

> ... ಪುರಾತನ ಸಭೆಯಲ್ಲಿ ಕರ್ತನ ಭೋಜನದ ಆಚರಣೆಗಾಗಿ ಸ್ಥಳೀಕ ಸಭೆಯು ಒಂದಾಗಿ ಕೂಡಿ ಬಾರದೇ ಭಾನುವಾರವು ದಾಟಿಹೋಗುವಂಥದ್ದನ್ನು ವಿಚಾರಿಸಲಾಗುವದಿಲ್ಲ. ಕರ್ತನ ಭೋಜನವಿಲ್ಲದೇ ಭಾನುವಾರವು ಸಂಪೂರ್ಣವಾಗಿ ಏನೂ ಇಲ್ಲದ್ದಾಗಿರುತ್ತಿತ್ತು; ಕರ್ತನ ಭೋಜನವು ಆರಾಧನೆಯ ಕೇಂದ್ರವಾಗಿದ್ದು ಆರಾಧನೆಯ ಇತರ ಭಾಗಗಳು ಅದರ ಸುತ್ತಲೂ ಇರುತ್ತಿದ್ದವು, ಬೇರೆ ಸಮಯಗಳಲ್ಲಿ ಸಾಮಾನ್ಯ ಪ್ರಾರ್ಥನೆಗಾಗಿ ಇಲ್ಲವೇ ಸಾಮಾನ್ಯ ಭೋಜನಕ್ಕಾಗಿ ಕೂಡಿಬರುವಂಥದ್ದು ಇತ್ತು, ಆದರೆ ಭಾನುವಾರ ಕರ್ತನ ಭೋಜನಕ್ಕಾಗಿ ಮಾತ್ರವೇ ಇತ್ತು.[29]

ಕ್ರೈಸ್ತರಿಗಾಗಿ, ಭಾನುವಾರವು ಒಂದು ವಿಶೇಷ ದಿನವಾಗಿದೆ - ವಿಶ್ರಾಂತಿಗಾಗಿ ಅಲ್ಲ, ಆದರೆ ಆರಾಧನೆಗಾಗಿ. ವಿಶೇಷವಾಗಿ, ಕ್ರೈಸ್ತರು ಆ ದಿನ ಯೇಸುವು ಪುನಃ ಬರುವವರೆಗೆ ಆತನ ಜ್ಞಾಪಕದಲ್ಲಿ ಕರ್ತನ ಭೋಜನದಲ್ಲಿ ಭಾಗವಹಿಸಲು ಬರುವರು (1 ಕೊರಿಂಥ 11:26).

---

ಟಿಪ್ಪಣೆಗಳು

[1]J. D. Douglas, ed., The New International Dictionary of the Bible, gen. ed. Merrill C. Tenney (Grand Rapids, Mich.: Regency Reference Library, Zondervan Publishing House, 1987), s.v. "Synagogue," by Walter W. Wessel. [2]F. F. Bruce, *Commentary on the Book of the Acts,* The New International Commentary on the New Testament, gen. ed. F. F. Bruce (Grand Rapids, Mich.: Wm. B. Eerdmans Publishing Co., 1986), 407-8. [3]Simon J. Kistemaker, *New Testament Commentary: Exposition of the Acts of the Apostles* (Grand Rapids, Mich.: Baker Book House, 1990), 716. [4]Willy Rordorf, *Sunday*, trans. A. A. K. Graham (Philadelphia: Westminster Press, 1968), 221. [5]J. W. McGarvey, *New Commentary on Acts of Apostles*, vol. 2 (Lexington, Ky.: N.p., 1892; reprint, Delight, Ark.: Gospel Light, n.d.), 179. [6]*The Interlinear NASB-NIV Parallel New Testament in Greek and English*, interlinear trans. Alfred Marshall (Grand Rapids, Mich.: Zondervan Publishing House, 1993), 702. [7]H. Waterman, "The Lord's Day," in *The Zondervan Pictorial Encyclopedia of the Bible*, vol. 3, gen. ed. Merrill C. Tenney (Grand

Rapids, Mich.: Zondervan Publishing House, 1975), 965. [8]*Gospel of Peter* 12:50, quoted in Everett Ferguson, *Early Christians Speak* (Abilene, Tex.: Biblical Research Press, 1971), 68. [9]Clement of Alexandria *Miscellanies* VII. xii.76.4, quoted in Ferguson, 68. [10]Waterman, 964.

[11]Geoffrey W. Bromiley, "Lord's Day," in *The International Standard Bible Encyclopedia,* gen. ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:159. [12]*Pliny Letters* X.xcvi, quoted in Ferguson, 81. [13]*Didache* 14:1, in J. B. Lightfoot, trans, and ed., *The Apostolic Fathers,* ed. and completed J. R. Harmer (London: Macmillian and Co., 1891; reprint, Grand Rapids, Mich.: Baker Book House, 1971), 128. [14]*Epistle of Barnabas* 15, in Lightfoot, 152. [15]Justin Martyr *Dialogue With Trypho* 41:4, quoted in Ferguson, 68. [16]Justin Martyr *Apology* I 67.3. [17]Justin Martyr *Apology* I 67.7. [18]Justin Martyr *Apology* I 67.6 [19]Justin Martyr *Dialogue With Trypho* 10:1, quoted in Ferguson, 68. [20]Quoted in Eusebius *Ecclesiastical History* 4.23.

[2I]Irenaeus, quoted in Eusebius 5.24. [22]Waterman, 966. [23]Tertullian *To the Nations* 1.13. [24]Tertullian *On Idolatry* 14.6, quoted in Ferguson, 68. [25]Bardesanes *On Fate*, quoted in Ferguson, 69, [26]*The Teaching of the Apostles,* The Ante-Nicene Fathers, vol. 8, 668. [27]Cyprian, *Epistle* 64.44, quoted in Waterman, 966. [28]Ferguson, 70. [29]Rordorf, 305.

© 2009 Truth for Today